# ಕನ್ನಡ ವಿಶ್ವವಿದ್ಯಾಲಯ, ಹಂಪಿ
## ದೂರಶಿಕ್ಷಣ ನಿರ್ದೇಶನಾಲಯ
ವಿದ್ಯಾರಣ್ಯ-583 276

---

ಸಂಖ್ಯೆ:ಕವಿಹಂ:ದೂಶಿನಿ:17:ಪರೀಕ್ಷೆ:2019-20 ಸೆಪ್ಟೆಂಬರ್ 24, 2019

**ವಿಷಯ : ಪರೀಕ್ಷಾ ಕೇಂದ್ರದ ಸಂಯೋಜನಾಧಿಕಾರಿಗಳ ಪರೀಕ್ಷಾ ಸೂಚನೆಗಳನ್ನು ಅನುಸರಿಸುವ ಕುರಿತು.**

**ಉಲ್ಲೇಖ : 1. ದಿನಾಂಕ 20.09.2019ರಂದು ನಡೆದ ಉನ್ನತ ಸಲಹಾ ಮಂಡಳಿ ಸಭೆ 16 ನಿರ್ಣಯ**
**2. ಮಾನ್ಯ ಕುಲಪತಿಯವರ ಅನುಮೋದನೆ:ಕಂಡಿಕೆ ಸಂಖ್ಯೆ:05:ದಿ 17.10.2018**
**3. ಪರೀಕ್ಷಾ ಕಾರ್ಯದ ಅನುಮೋದನೆ ಕಡತ ಸಂಖ್ಯೆ: ಕವಿಹಂ: ದೂಶಿನಿ: 2018-19 ಪರೀಕ್ಷೆ:ಕ: 20:2019-20ರ ಕಂಡಿಕೆ ಸಂಖ್ಯೆ:26 ದಿನಾಂಕ 24.09.2019**

* * *

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಕನ್ನಡ ವಿಶ್ವವಿದ್ಯಾಲಯ, ಹಂಪಿಯ ದೂರಶಿಕ್ಷಣ ನಿರ್ದೇಶನಾಲಯದ ವಿವಿಧ **ಸ್ನಾತಕೋತ್ತರ ಪದವಿ ಮತ್ತು ಡಿಪ್ಲೊಮ ಕೋರ್ಸ್‌ಗಳ 2018-19ನೇ ಸಾಲಿನ ವಾರ್ಷಿಕ ಪರೀಕ್ಷೆಗಳು ದಿನಾಂಕ: 02.11.2019 ರಿಂದ 06.11.2019ವರೆಗೆ** ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ಕೇಂದ್ರ ಹಾಗೂ ರಾಜ್ಯದ 06 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳನ್ನು ನಡೆಸಲು ಉಲ್ಲೇಖಿತ ಕಡತದಲ್ಲಿ ಮಾನ್ಯ ಕುಲಪತಿಗಳು ಅನುಮೋದನೆ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಪರೀಕ್ಷಾ ಪ್ರಕ್ರಿಯೆಗಳು ಆರಂಭಗೊಂಡಿದ್ದು, ಈ ಕೆಳಗಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲು ಕೋರಿದೆ.

1. ಡಿಪ್ಲೊಮ ಮತ್ತು ಸ್ನಾತಕೋತ್ತರ ಪದವಿಗಳ ವಾರ್ಷಿಕ ಪರೀಕ್ಷೆಗಳು ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ಕೇಂದ್ರ ಹಾಗೂ ದೂರಶಿಕ್ಷಣ ನಿರ್ದೇಶನಾಲಯದಿಂದ ಮಾನ್ಯತೆ ಪಡೆದಿರುವ 06 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯುತ್ತವೆ.

2. ಪರೀಕ್ಷೆ ಬರೆಯಲು ಅನುಮತಿ ಪಡೆದಿರುವ ವಿದ್ಯಾರ್ಥಿಗಳಿಗೆ ಸೂಚನಾ ಪತ್ರ, ಪರೀಕ್ಷಾ ವೇಳಾಪಟ್ಟಿ ಹಾಗೂ ಇತರೆ ಮಾಹಿತಿಗಳನ್ನು ಈಗಾಗಲೇ ಅಂಚೆ ಮೂಲಕ ರವಾನಿಸಲಾಗಿದೆ ಮತ್ತು ವಿಶ್ವವಿದ್ಯಾಲಯದ ಅಧಿಕೃತ ವೆಬ್‌ಸೈಟ್ www.kannadauniversity.org ನಲ್ಲಿ ಅಪ್‌ಲೋಡ್ ಮಾಡಲಾಗಿದೆ.

3. ಪ್ರಥಮ ವರ್ಷದ ಎಂ.ಎ. ಕನ್ನಡ, ಚರಿತ್ರೆ, ಸಮಾಜಶಾಸ್ತ್ರ ಹಾಗೂ ಎಂ.ಎ. ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಹಾಗೂ ಪತ್ರಿಕೋದ್ಯಮ ಅಧ್ಯಯನ ಡಿಪ್ಲೊಮ, ನಾಟಕ ಕಲೆ ಮತ್ತು ಕನ್ನಡ ಸಾಹಿತ್ಯ ಡಿಪ್ಲೊಮ ಕೋರ್ಸ್‌ಗಳ ವಾರ್ಷಿಕ ಪರೀಕ್ಷೆಗಳು ದಿನಾಂಕ 02.11.2019 ರಿಂದ 06.11.2019ರ ವರೆಗೆ ಬೆಳಗ್ಗೆ 10.30 ರಿಂದ 1.30ರ ವರೆಗೆ ನಡೆಯುತ್ತವೆ.

4. ಅಂತಿಮ ವರ್ಷದ ಎಂ.ಎ. ಕನ್ನಡ, ಚರಿತ್ರೆ, ಸಮಾಜಶಾಸ್ತ್ರ ಹಾಗೂ ಎಂ.ಎ. ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಹಾಗೂ ಪುರಾತತ್ವ ಸಂಸ್ಕೃತಿ ಮತ್ತು ಪ್ರವಾಸೋದ್ಯಮ, ಭಾಷಾಂತರ ಅಧ್ಯಯನ, ಶಾಸನಶಾಸ್ತ್ರ ಕೋರ್ಸ್‌ಗಳ ವಾರ್ಷಿಕ ಪರೀಕ್ಷೆಗಳು ದಿನಾಂಕ 02.11.2019 ರಿಂದ 06.11.2019ರ ವರೆಗೆ ಮಧ್ಯಾಹ್ನ 2.30 ರಿಂದ 5.30ರ ವರೆಗೆ ನಡೆಯುತ್ತವೆ.

5. ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯದಲ್ಲಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ಯಾವುದೇ ಬಗೆಯ ಶುಲ್ಕಗಳು ಬಾಕಿ ಇದ್ದಲ್ಲಿ ದಂಡ ಶುಲ್ಕದೊಂದಿಗೆ ದಿನಾಂಕ: 30.09.2019ರೊಳಗೆ ಪೂರ್ಣ ಶುಲ್ಕ ಪಾವತಿಸಿ ನಂತರ ದೂರಶಿಕ್ಷಣ ನಿರ್ದೇಶನಾಲಯದಲ್ಲಿ ಪರೀಕ್ಷಾ ಪ್ರವೇಶ ಪತ್ರಗಳನ್ನು ನೀಡಲಾಗುವುದು.

6. ಪರೀಕ್ಷಾ ಕೇಂದ್ರ ಬದಲಾವಣೆಗೆ ಅರ್ಜಿ ಸಲ್ಲಿಸಲು ದಿನಾಂಕ: 30.09.2019ರೊಳಗೆ ರೂ. 1500/-ಗಳ ಶುಲ್ಕ ಪಾವತಿಸಿ ನಂತರ ದೂರಶಿಕ್ಷಣ ನಿರ್ದೇಶನಾಲಯದಲ್ಲಿ ಪರೀಕ್ಷಾ ಪ್ರವೇಶ ಪತ್ರಗಳನ್ನು ನೀಡಲಾಗುವುದು.

7. ದೂರಶಿಕ್ಷಣ ನಿರ್ದೇಶನಾಲಯದ ವತಿಯಿಂದ ಅನುಮೋದನೆ ಪಡೆದಿರುವ ಅಧ್ಯಯನ ಕೇಂದ್ರದ ವಿದ್ಯಾರ್ಥಿಗಳು ವಾರ್ಷಿಕ ಪರೀಕ್ಷೆಗಳನ್ನು ಬರೆಯಲು ಯಾವುದೇ ತೊಂದರೆಯಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು.

8. ಪರೀಕ್ಷೆಗಳನ್ನು ಅತ್ಯಂತ ಶಿಸ್ತಿನಿಂದ ಕಟ್ಟುನಿಟ್ಟಾಗಿ ನಡೆಸಲಾಗುವುದು. ಸಂಯೋಜಕರು ಮತ್ತು ಕೊಠಡಿ ಮೇಲ್ವಿಚಾರಕರು ಹಾಗೂ ಪರೀಕ್ಷಾ ಸಿಬ್ಬಂದಿಗಳು ಪೂರ್ಣವಾಗಿ ಕರ್ತವ್ಯ ನಿರ್ವಹಿಸುವಂತೆ ನೋಡಿಕೊಳ್ಳಬೇಕು.

9. ಪರೀಕ್ಷಾ ಕಾರ್ಯದಲ್ಲಿ ಯಾವುದೇ ರೀತಿಯ ಕ್ರಮಲೋಪವನ್ನು ವಿಶ್ವವಿದ್ಯಾಲಯವು ಸಹಿಸುವುದಿಲ್ಲ. ಏನೇ ಗಂಭೀರ ಕ್ರಮಲೋಪವಾದರೂ ಅದರ ಹೊಣೆಯು ಆಯಾ ಪರೀಕ್ಷಾ ಕೇಂದ್ರಗಳದ್ದಾಗಿರುತ್ತದೆ.

10. ಪರೀಕ್ಷಾ ಕೇಂದ್ರವು ಪರೀಕ್ಷಾ ಕೊಠಡಿಗಳನ್ನು ಸಾಧ್ಯವಾದಷ್ಟು ಕೆಳ ಅಂತಸ್ತಿನಲ್ಲಿ ಅಕ್ಕಪಕ್ಕದಲ್ಲಿ ಬರುವಂತೆ ವ್ಯವಸ್ಥೆ ಮಾಡಬೇಕು.

11. ಪರೀಕ್ಷೆಗಳನ್ನು ವ್ಯವಸ್ಥೆ ಮಾಡಲು ಬಂದಿರುವ ವಿಶ್ವವಿದ್ಯಾಲಯದ ಪರೀಕ್ಷಾಧಿಕಾರಿಗಳಿಗೆ ಪರೀಕ್ಷಾ ಕೇಂದ್ರದ ಸಂಯೋಜಕರು ಪೂರ್ಣ ಸಹಕಾರ ನೀಡಿ ಯಾವುದೇ ಕ್ರಮಲೋಪವಾಗದ ಹಾಗೆ ಸಹಕರಿಸಬೇಕು.

12. ನಿಮಗೆ ಕೊಟ್ಟಿರುವ ಕೊಠಡಿ ಮೇಲ್ವಿಚಾರಕರು ಮತ್ತು ಡಿ.ದರ್ಜೆ ಸಿಬ್ಬಂದಿಗಳ ಸೂಚನೆಗಳನ್ನು, ಕೊಠಡಿ ಮೇಲ್ವಿಚಾರಕರು ಮತ್ತು ಡಿ.ದರ್ಜೆ ಸಿಬ್ಬಂದಿಗಳಿಗೆ ತಪ್ಪದೇ ಪಾಲಿಸಲು ಸೂಚಿಸಬೇಕು.

13. ಪರೀಕ್ಷಾ ಕೇಂದ್ರಕ್ಕೆ ಸಂಲಗ್ನಗೊಳಿಸಿರುವ ಬೇರೆ ಬೇರೆ ಅಧ್ಯಯನ ಕೇಂದ್ರಗಳ ಸಂಯೋಜಕರು ತಮ್ಮ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರದಲ್ಲಿ ಯಾವುದೇ ರೀತಿಯಲ್ಲಿಯೂ ಅಶಿಸ್ತಿನಿಂದ ನಡೆದುಕೊಳ್ಳದಂತೆ ಮಾರ್ಗದರ್ಶನ ಮಾಡಬೇಕು.

14. ಪರೀಕ್ಷಾ ಕೊಠಡಿಯಲ್ಲಿ ಗಾಳಿ ಮತ್ತು ಬೆಳಕು ಇರುವಂತೆ ನೋಡಿಕೊಳ್ಳುವುದು.

15. ಎಲ್ಲಾ ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರು ಪರೀಕ್ಷಾ ಕೊಠಡಿಗಳಲ್ಲಿ ಪರೀಕ್ಷಾ ಸಾಮಗ್ರಿಗಳನ್ನು ಇರಿಸಲು ಸುಸಜ್ಜಿತವಾದ ಗಾರ್ಡೇಜ್‌ಗಳನ್ನು ನೀಡಬೇಕು ಮತ್ತು ಪರೀಕ್ಷಾ ಸಾಮಗ್ರಿಗಳನ್ನು ಇರಿಸಿರುವ ಕೊಠಡಿಯಲ್ಲಿ ಸಿ.ಸಿ. ಕ್ಯಾಮರಾಗಳನ್ನು ಅಳವಡಿಸಬೇಕು.

16. ಪರೀಕ್ಷಾ ಕೇಂದ್ರದವರು ಆರಕ್ಷಕ ಠಾಣೆಗೆ ಪರೀಕ್ಷಾ ವಿಚಾರವನ್ನು ತಿಳಿಸಿ ಸೂಕ್ತ ರಕ್ಷಣೆಗೆ ಕ್ರಮವಹಿಸಲು ಕೋರುವುದು. ಆರಕ್ಷಕ ಠಾಣೆಗೆ ವರದಿ ಮಾಡಿದ ಪ್ರತಿಯೊಂದನ್ನು ವಿಶ್ವವಿದ್ಯಾಲಯಕ್ಕೆ ನಿರ್ದೇಶಕರು, ದೂರಶಿಕ್ಷಣ ನಿರ್ದೇಶನಾಲಯ ಇವರಿಗೆ ಕಳುಹಿಸಿಕೊಡಬೇಕು.

17. ಮೊಬೈಲ್ ಫೋನ್, ಪೇಜರ್, ಕ್ಯಾಲಿಕ್ಯುಲೇಟರ್ ಇತ್ಯಾದಿ ಎಲೆಕ್ಟ್ರಾನಿಕ್ ಉಪಕರಣಗಳನ್ನು ಪರೀಕ್ಷಾ ಕೊಠಡಿಯ ಒಳಗೆ ತರುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ಮೊಬೈಲ್ ಫೋನ್‌ಗಳನ್ನು ಕಡ್ಡಾಯವಾಗಿ ಸ್ವಿಚ್‌ಆಫ್ ಮಾಡುವಂತೆ ಮತ್ತು ಪರೀಕ್ಷಾ ಕೊಠಡಿಯ ಹೊರಗಡೆಗೆ ಇಡಲು ವ್ಯವಸ್ಥೆ ಮಾಡಬೇಕು.

18. ಪರೀಕ್ಷಾ ಕೇಂದ್ರದ ವ್ಯಾಪ್ತಿಯಲ್ಲಿ ಪರೀಕ್ಷಾರ್ಥಿಗಳನ್ನು ಹಾಗೂ ತತ್ಸಂಬಂಧಿ ವ್ಯಕ್ತಿಗಳನ್ನು ಬಿಟ್ಟು ಇತರರ ಪ್ರವೇಶವನ್ನು 100 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಿಸಲಾಗಿದೆ.

19. ಪರೀಕ್ಷಾ ಅಭ್ಯರ್ಥಿಯು ಪ್ರವೇಶ ಪತ್ರವನ್ನು ಹೊಂದಿರುವುದು ಕಡ್ಡಾಯ. ವಿದ್ಯಾರ್ಥಿಗಳಿಗೆ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಬರೆಯಲು ಮತ್ತು ಪರೀಕ್ಷಾ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ನಿರ್ದೇಶನಗಳನ್ನು ನೀಡಬೇಕು.

20. **ಪರೀಕ್ಷೆ ನಂತರ ಕೈಗೊಳ್ಳಬೇಕಾದ ಕ್ರಮಗಳು :** ಪರೀಕ್ಷೆಗೆ ಕುಳಿತ ಅಭ್ಯರ್ಥಿಗಳ ಉತ್ತರ ಪತ್ರಿಕೆಗಳನ್ನು ತಾಳೆನೋಡಿ ನೋಂದಣಿ ಸಂಖ್ಯೆಗೆ ಅನುಗುಣವಾಗಿ ಇವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು.

21. ಉತ್ತರ ಪತ್ರಿಕೆಗಳನ್ನು ವಿಶ್ವವಿದ್ಯಾಲಯದಿಂದ ಕಳುಹಿಸಲಾದ ಪರೀಕ್ಷಾಧಿಕಾರಿ, ಅಧ್ಯಯನ ಕೇಂದ್ರದ ಸಂಯೋಜಕರು ಹಾಗೂ ಕೊಠಡಿ ಮೇಲ್ವಿಚಾರಕರ ಸಮ್ಮುಖದಲ್ಲಿ ಸೀಲ್ ಮಾಡಬೇಕು.

22. ಲಿಖಿತ ಪರೀಕ್ಷೆ ಆರಂಭಗೊಂಡ ಒಂದು ಗಂಟೆಯವರೆಗೆ ಯಾವುದೇ ವಿದ್ಯಾರ್ಥಿ ಉತ್ತರ ಪತ್ರಿಕೆಯನ್ನು ನೀಡಿ ಹೊರಗೆ ಹೋಗದಂತೆ ಎಚ್ಚರ ವಹಿಸಬೇಕು.

23. ನಕಲು ಇತ್ಯಾದಿ ಪರೀಕ್ಷಾ ಅಕ್ರಮಗಳಲ್ಲಿ ವಿದ್ಯಾರ್ಥಿ ತೊಡಗಿದ್ದ ಪಕ್ಷದಲ್ಲಿ ಕೂಡಲೇ ಆ ವಿದ್ಯಾರ್ಥಿಯು ಬರೆಯುತ್ತಿದ್ದ ಉತ್ತರ ಪತ್ರಿಕೆಯನ್ನು ಮುಟ್ಟುಗೋಲು ಹಾಕಿಕೊಳ್ಳುವುದು. ಈ ಸಂದರ್ಭದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೊಠಡಿಯ ಮೇಲ್ವಿಚಾರಕರು ದೂರಶಿಕ್ಷಣ ಅಧ್ಯಯನ ಕೇಂದ್ರದ ಸಂಯೋಜಕರು ಅಥವಾ ಆ ಸಂಸ್ಥೆಯ ಪ್ರಾಂಶುಪಾಲರ ಸಹಿಗಳನ್ನು ಪಡೆದು ಪ್ರತ್ಯೇಕ ಲಕೋಟೆಯಲ್ಲಿ ಸೀಲ್ ಮಾಡಿ ನಿರ್ದೇಶಕರಿಗೆ ಒಪ್ಪಿಸಬೇಕು.

24. ಪರೀಕ್ಷೆಗಳು ಸುಗಮವಾಗಿ ನಡೆಯುವಂತೆ ನೋಡಿಕೊಳ್ಳುವುದು ಮತ್ತು ಪರೀಕ್ಷಾ ಗೌಪ್ಯತೆಯನ್ನು ಕಾಪಾಡುವುದು. ಪರೀಕ್ಷಾ ಕಾರ್ಯದಲ್ಲಿ ಪೂರ್ಣ ಸಹಕಾರ ನೀಡಿ ಯಶಸ್ವಿಗೊಳಿಸುವುದು.

ನಿರ್ದೇಶಕರು 24/9/19

**ಇವರಿಗೆ,**

ಎಲ್ಲಾ ವಿಸ್ತರಣಾ ಕೇಂದ್ರಗಳ ಮುಖ್ಯಸ್ಥರುಗಳಿಗೆ
ಮತ್ತು ಎಲ್ಲಾ ಅಧ್ಯಯನ ಕೇಂದ್ರಗಳ ಸಂಯೋಜಕರುಗಳಿಗೆ

**ಪ್ರತಿಗಳು,**

1. ಮಾನ್ಯ ಕುಲಪತಿಯವರ ಆಪ್ತಶಾಖೆ, ಕವಿಹಂ
2. ಮಾನ್ಯ ಕುಲಸಚಿವರ ಆಪ್ತಶಾಖೆ, ಕವಿಹಂ
3. ಕಚೇರಿ ಪ್ರತಿ